ಪ್ರಮಾಣಪತ್ರವನ್ನು ಹಾಜರುಪಡಿಸಲು ತಪ್ಪಿದಲ್ಲಿ ವಾಹನದ ಮಾಲೀಕರ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗುವುದು. 1988ರ ಮೋಟಾರು ವಾಹನ ಕಾಯ್ದೆಯ ಕಲಂ 190(2)ರಂತೆ ಈ ಅಪರಾಧಕ್ಕೆ ಮೊದಲ ಬಾರಿ ರೂ. 1000-00 ಹಾಗೂ ಎರಡನೇ ಮತ್ತು ತದನಂತರದ ಅಪರಾಧಕ್ಕಾಗಿ ರೂ. 2000-00 ದಂಡ ವಿಧಿಸಬಹುದಾಗಿದೆ.

ವಾಹನಗಳಿಂದುಂಟಾಗುವ ವಾಹನ ವಾಯುಮಾಲಿನ್ಯವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಸಲುವಾಗಿ ಸಾರಿಗೆ ಇಲಾಖೆಯು ಎಲ್ಲಾ ವರ್ಗದ ವಾಹನಗಳನ್ನೂ ನಿಯಮಿತವಾಗಿ ತನಿಖೆಗೆ ಒಳಪಡಿಸುತ್ತಿದೆ. ದಿನಾಂಕ : 1-4-97ರಿಂದ 28-2-98ರವರೆಗೆ ಒಟ್ಟು 3,66,214 ವಾಹನಗಳನ್ನು ತಪಾಸಣೆಗೆ ಗುರಿಪಡಿಸಿ, ಅವುಗಳಲ್ಲಿ 6218 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ ಹಾಗೂ 2659 ವಾಹನಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಿ, ರೂ.23,000-00 ದಂಡ ವಸೂಲಿ ಮಾಡಲಾಗಿದೆ.

ವಿಷಯ: ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಸೌಲಭ್ಯ ಒದಗಿಸುವುದು.

979 (1365)

ಶ್ರೀ ಎಸ್.ಪಿ.ಮುದ್ದೆಹನುಮೇಗೌಡ: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1. ಸರ್ಕಾರೀ ಆಸ್ಪತ್ರೆಗಳಲ್ಲಿ ಹೆಚ್ಚಿನ ಸೌಲಭ್ಯದ ಕೊರತೆಯಿಂದಾಗಿ ಖಾಸಗೀ ಆಸ್ಪತ್ರೆಗಳಿಗೆ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಈ ಆಸ್ಪತ್ರೆಗಳಲ್ಲಿರುವ ಗುಣಮಟ್ಟವನ್ನು ಕಾಪಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಬಂದಿರುವುದಿಲ್ಲ.

2. ಭಾರತೀಯ ಜನಸಂಖ್ಯಾ ಯೋಜನೆ-9 ಮತ್ತು ವಿಶ್ವಬ್ಯಾಂಕಿನ ನೆರವಿನಿಂದ ಕರ್ನಾಟಕ ಆರೋಗ್ಯ ವ್ಯವಸ್ಥೆ, ಅಭಿವೃದ್ಧಿ ಯೋಜನೆಗಳಡಿಯಲ್ಲಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಇರುವ ಸರ್ಕಾರೀ ಆಸ್ಪತ್ರೆಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಗುಣಮಟ್ಟ ವೃದ್ಧಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.